# ‘ಸ್ತ್ರೀ ಗೌರವ’ ಒಂದೇ ಸಾಕೆ?

ಸ್ವಚ್ಛತೆ ಎನ್ನುವುದು ಬಹಿರಂಗ ಶುದ್ಧಿಗೆ ಸಂಬಂಧಿಸಿದ್ದು ಮಾತ್ರವಲ್ಲ, ಅದು ಅಂತರಂಗಕ್ಕೂ ಸಂಬಂಧಿಸಿದ್ದು. ಅಂತರಂಗ ಶುದ್ಧಿ ಸಾಧ್ಯವಾದಲ್ಲಿ ‘ಸ್ವಚ್ಛ ಭಾರತ’ದೊಡನೆ ‘ಸಮಾನತೆಯ ಭಾರತ’ವೂ ರೂಪುಗೊಳ್ಳುವುದು. ಸಮಾನತೆ ಎಂದಾಕ್ಷಣ ನಾವು ಜಾತೀಯತೆ ಬಗ್ಗೆ ಯೋಚಿಸುತ್ತೇವೆ. ಜಾತೀಯತೆ ನಿರ್ಮೂಲನದ ಜೊತೆಗೆ ಗಂಡು–ಹೆಣ್ಣಿನ ನಡುವಣ ತಾರತಮ್ಯದ ನಿವಾರಣೆ ಸಾಧ್ಯವಾದಾಗಷ್ಟೇ ನಿಜವಾದ ಸಮಾನತೆ ಸಾಕಾರಗೊಳ್ಳುತ್ತದೆ.



ಈಶ್ವರ್

ಹೆಣ್ಣುಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ದೇಶದಲ್ಲಿ ಜಾಗೃತಿಯ ಗಾಳಿ ನಿಧಾನವಾಗಿ ಬೀಸುತ್ತಿರುವ ದಿನಗಳಿವು. ಇದು ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಘಟನೆಗಳು ಹೆಚ್ಚುತ್ತಿರುವ ಕಾರಣದಿಂದಾಗಿ ರೂಪುಗೊಳ್ಳುತ್ತಿರುವ ಸಣ್ಣ ಪ್ರಮಾಣದ ಜಾಗೃತಿ. ವಿಪರ್ಯಾಸವೆಂದರೆ, ಈ ಶೋಷಣೆ ಕೇವಲ ಲೈಂಗಿಕ ದೌರ್ಜನ್ಯಕ್ಕಷ್ಟೇ ಸೀಮಿತವಾಗಿಲ್ಲ. ಗಳಿಕೆ, ಸಾಕ್ಷರತೆ, ವೇತನ ಸಮಾನತೆ, ಉದ್ಯೋಗದ ಅವಕಾಶಗಳು– ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಭಾರತದಲ್ಲಿ ಎರಡನೆ ದರ್ಜೆಯವರಾಗಿಯೇ ಉಳಿದಿದ್ದಾರೆ. ಈ ವಿಪರ್ಯಾಸ ‘ವಿಶ್ವ ಆರ್ಥಿಕ ವೇದಿಕೆ’ (ವರ್ಲ್ಡ್ ಎಕನಾಮಿಕ್ ಫೋರಂ) ಬಿಡುಗಡೆ ಮಾಡಿರುವ 2014ರ ವರದಿಯ (ಜೆಂಡರ್ ಗ್ಯಾಪ್ ಇಂಡೆಕ್ಸ್) ಮುಖ್ಯಾಂಶಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಈ ವರದಿಯಲ್ಲಿನ ಅಂಕಿ ಅಂಶಗಳ ಪ್ರಕಾರ, ಲಿಂಗ ತಾರತಮ್ಯಕ್ಕೆ ಸಂಬಂಧಿಸಿದಂತೆ ಭಾರತ ವಿಶ್ವದಲ್ಲಿ 114ನೇ ಸ್ಥಾನದಲ್ಲಿದೆ. ಒಟ್ಟು 142 ದೇಶಗಳ ಪೈಕಿ ಭಾರತಕ್ಕೆ ದೊರೆತಿರುವ ಸ್ಥಾನವಿದು. ಇದೇ ಪಟ್ಟಿಯಲ್ಲಿ ಕಳೆದ ವರ್ಷ ಭಾರತ 101ನೇ ಸ್ಥಾನದಲ್ಲಿದ್ದದನ್ನು ಗಮನಿಸಿದರೆ, ಸಮಾನತೆಯ ನಿಟ್ಟಿನಲ್ಲಿ ಭಾರತ ಹಿಮ್ಮುಖವಾಗಿ ಚಲಿಸುತ್ತಿದೆ ಎಂದಾಯಿತು. ಅಂದರೆ, ಅಭಿವೃದ್ಧಿಯ ಹಪಾಹಪಿಯಲ್ಲಿರುವ ದೇಶದಲ್ಲಿ, ಏಳಿಗೆ ಎನ್ನುವುದು ಪುರುಷ ಕೇಂದ್ರಿತವಾಗಿಯೇ ಇರುವುದರ ಸೂಚನೆಯಿದು.

ಲಿಂಗ ಅನುಪಾತ, ಸಾಕ್ಷರತೆ, ಆದಾಯ, ಮುಂತಾದ ವಿಷಯಗಳಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿರುವ ವಿಶ್ವದ ಇಪ್ಪತ್ತು ದೇಶಗಳಲ್ಲಿ ಭಾರತವೂ ಒಂದಾಗಿರುವುದು ಆತಂಕ ಹುಟ್ಟಿಸುವ ಸಂಗತಿ. ಸಮಾಧಾನಕರ ಸಂಗತಿಯೆಂದರೆ, ರಾಜಕೀಯವಾಗಿ ಮಹಿಳೆಯರ ಸಶಕ್ತೀಕರಣಕ್ಕೆ ಸಂಬಂಧಿಸಿದಂತೆ ಉತ್ತಮ ಸಾಧನೆ ತೋರಿರುವ ದೇಶಗಳ ಪಟ್ಟಿಯಲ್ಲಿ ಭಾರತ ಹದಿನೈದನೇ ಸ್ಥಾನದಲ್ಲಿದೆ. ವಿವಿಧ ರಾಜ್ಯಗಳಲ್ಲಿ ಮಹಿಳೆಯರು ಮುಖ್ಯಮಂತ್ರಿಗಳಾಗಿರುವುದು, ಸ್ಥಳೀಯ ಹಂತದ ಆಡಳಿತದಲ್ಲಿ ಮಹಿಳೆಯರ ಪ್ರಾತಿನಿಧ್ಯ ಗಮನಾರ್ಹ ಸಂಖ್ಯೆಯಲ್ಲಿ ಇರುವುದು– ಈ ಕಾರಣಗಳಿಂದಾಗಿ ಈ ಯಶಸ್ಸು ಸಾಧ್ಯವಾಗಿದೆ. ಆದರೆ, ರಾಜಕಾರಣಕ್ಕೆ ಸಂಬಂಧಿಸಿದ ಈ ಗಮನಾರ್ಹ ಸಾಧನೆಯನ್ನು ಆರೋಗ್ಯ ಕ್ಷೇತ್ರದಲ್ಲಿ ಅತ್ಯಂತ ಕಳಪೆ ಸೂಚ್ಯಂಕ ಮರೆಸುವಂತಿದೆ. ಅರ್ಮೇನಿಯಾವನ್ನು ಬಿಟ್ಟರೆ ನಂತರದ ಅತ್ಯಂತ ಶೋಚನೀಯ ಪರಿಸ್ಥಿತಿ ಭಾರತದ್ದು (141ನೇ ಸ್ಥಾನ).

ಲಿಂಗಾಧಾರಿತ ತಾರತಮ್ಯಗಳಿಗೆ ಸಂಬಂಧಿಸಿದ ವಿಶ್ವ ಆರ್ಥಿಕ ವೇದಿಕೆಯ ಸೂಚ್ಯಂಕ 2006ರಿಂದಲೂ ಪ್ರಕಟವಾಗುತ್ತಿದೆ. ಆರ್ಥಿಕ, ರಾಜಕಾರಣ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಲಿಂಗ ವ್ಯತ್ಯಾಸ ಕುರಿತಂತೆ ಈ ಪಟ್ಟಿ ತಯಾರಾಗುತ್ತದೆ. 2010ರಲ್ಲಿ 112ನೇ ಸ್ಥಾನ, 2012ರಲ್ಲಿ 105 ಹಾಗೂ ಕಳೆದ ವರ್ಷ 101ನೇ ಸ್ಥಾನ ಭಾರತಕ್ಕೆ ದೊರೆತಿತ್ತು. ಆದರೆ, ಪ್ರಸ್ತುತ 13 ಸ್ಥಾನಗಳಷ್ಟು ಕುಸಿತ ಕಂಡಿರುವ ಭಾರತ 114ನೇ ಸ್ಥಾನಕ್ಕೆ ಬಂದುನಿಂತಿದೆ.

ಐಸ್ಲೆಂಡ್, ಫಿನ್ಲೆಂಡ್, ನಾರ್ವೆ ದೇಶಗಳು ಸೂಚ್ಯಂಕದಲ್ಲಿ ಮೊದಲ ಮೂರು ಸ್ಥಾನ ಪಡೆದಿವೆ. ಹಾಗೆಂದು ಗಂಡು ಹೆಣ್ಣಿನ ನಡುವಿನ ತರತಮವನ್ನು ಪೂರ್ಣ ಪ್ರಮಾಣದಲ್ಲಿ ಮೀರುವುದು ಯಾವ ದೇಶಕ್ಕೂ ಸಾಧ್ಯವಾಗಿಲ್ಲ. ಇದ್ದುದರಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ದೇಶಗಳು ಸಮಾನತೆಯನ್ನು ಸಾಧಿಸಿವೆ. ಆದರೆ, ಒಟ್ಟಾರೆ ಜಾಗತಿಕ ಸಂದರ್ಭದಲ್ಲಿ ಹೆಣ್ಣನ್ನು ಎರಡನೆಯವಳಾಗಿಯೇ ಉಳಿಸಲಾಗಿದೆ. ಭಾರತಕ್ಕೆ ಸಂಬಂಧಿಸಿದಂತೆ ಶಿಕ್ಷಣ ಕ್ಷೇತ್ರದಲ್ಲೂ ಸಮಾನತೆ ಮರೀಚಿಕೆಯಾಗಿಯೇ ಇದೆ. 2011ರ ಜನಗಣತಿಯ ಅಂಕಿಅಂಶಗಳು ಹೇಳುವಂತೆ– ದೇಶದ ಒಟ್ಟಾರೆ ಸಾಕ್ಷರತಾ ಪ್ರಮಾಣದಲ್ಲಿ ಮಹಿಳೆಯರ ಪಾಲು ಶೇ. 64.64ರಷ್ಟಿದ್ದರೆ, ಪುರುಷರ ಸಾಕ್ಷರತಾ ಪ್ರಮಾಣ ಶೇ. 80.89ರಷ್ಟಿದೆ.

ದೇಶದಲ್ಲೀಗ ‘ಸ್ವಚ್ಛ ಭಾರತ’ದ ಘೋಷಣೆ ಮೊಳಗುತ್ತಿದೆ. ಸ್ವಚ್ಛತೆ ಎನ್ನುವುದು ಬಹಿರಂಗ ಶುದ್ಧಿಗೆ ಸಂಬಂಧಿಸಿದ್ದು ಮಾತ್ರವಲ್ಲ, ಅದು ಅಂತರಂಗಕ್ಕೂ ಸಂಬಂಧಿಸಿದ್ದು. ಅಂತರಂಗ ಶುದ್ಧಿ ಸಾಧ್ಯವಾದಲ್ಲಿ ‘ಸ್ವಚ್ಛ ಭಾರತ’ದೊಡನೆ ‘ಸಮಾನತೆಯ ಭಾರತ’ವೂ ರೂಪುಗೊಳ್ಳುವುದು. ಸಮಾನತೆ ಎಂದಾಕ್ಷಣ ನಾವು ಜಾತೀಯತೆ ಬಗ್ಗೆ ಯೋಚಿಸುತ್ತೇವೆ. ಜಾತೀಯತೆ ನಿರ್ಮೂಲನದ ಜೊತೆಗೆ ಗಂಡು–ಹೆಣ್ಣಿನ ನಡುವಣ ತಾರತಮ್ಯದ ನಿವಾರಣೆ ಸಾಧ್ಯವಾದಾಗಷ್ಟೇ ನಿಜವಾದ ಸಮಾನತೆ ಸಾಕಾರಗೊಳ್ಳುತ್ತದೆ. ಆದರೆ, ಈ ಸಮಾನತೆ ರಾಜಕೀಯ ಮೇಲಾಟದ ಘೋಷಣೆಗಳಿಂದ, ಭಾಷಣಗಳ ಕಣ್ಕಟ್ಟಿನಿಂದ ಸಾಧ್ಯವಾಗುವಂತಹದ್ದಲ್ಲ. ಅದಕ್ಕೆ ಪಕ್ಷಾತೀತವಾದ ಪ್ರಾಮಾಣಿಕ ಇಚ್ಛಾಶಕ್ತಿ ಬೇಕು. ಈ ಕಾಳಜಿ ಅಧಿಕಾರದ ಮೊಗಸಾಲೆಗಳಲ್ಲಿ ಮಾತ್ರವಲ್ಲದೆ ಕುಟುಂಬ ಕುಟುಂಬಗಳಲ್ಲೂ ಮೈದಾಳಬೇಕು.

**■ ರಘುನಾಥ ಚ.ಹ.**